ಓ.ಎಸ್.ನಂ.**161/2010**
ಡಿಡಬ್ಲ್ಯೂ .**2**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **20.11.2024**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 1, 6, 7 ಮತ್ತು 10ನೇ ಪ್ರತಿವಾದಿ ಪರ ಶ್ರೀ ಡಿ.ಜಿ. ವಕೀಲರಿಂದ**

**4**ನೇ ಪ್ರತಿವಾದಿ ನನ್ನ ಹೆಂಡತಿ. ಈ ದಾವೆಯಲ್ಲಿ **4**ನೇ ಪ್ರತಿವಾದಿಯು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಇರುವ ಅಂಶವನ್ನು ತಿಳಿದುಕೊಂಡಿರುತ್ತೇನೆ. ನನ್ನ ಮತ್ತು **4**ನೇ ಪ್ರತಿವಾದಿಯ ಮದುವೆ ಸುಮಾರು **38** ವರ್ಷದ ಹಿಂದೆ ಆಗಿರುತ್ತದೆ. ಆದರೆ ನಿಖರವಾದ ದಿನಾಂಕ ಮತ್ತು ಇಸವಿ ಗೊತ್ತಿಲ್ಲ. ನಮ್ಮಿಬ್ಬರ ಮದುವೆ **1985** ರಲ್ಲಿ ಆಗಿರುತ್ತದೆ ಎಂದರೆ ಇರಬಹುದು. ನಮ್ಮ ವಿವಾಹವಾಗುವ ಮೊದಲು **4**ನೇ ಪ್ರತಿವಾದಿಯ ಕುಟುಂಬದಲ್ಲಿ ಆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. **1983** ರಲ್ಲೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ವಿಭಾಗವಾಗಿತ್ತು ಎಂದರೆ ಗೊತ್ತಿಲ್ಲ. ಸುಬ್ಬಣ್ಣನವರು ಜೋಡಿದಾರರಾಗಿದ್ದ ಕಾರಣ ದಾವಾ ಆಸ್ತಿಗಳು ಅವರಿಗೆ ಬಂದಿರುತ್ತದೆ. ಸುಬ್ಬಣ್ಣನಿಗೆ ನಾರಾಯಣಪ್ಪ ಎಂಬ ಅಣ್ಣ ಇದ್ದರು. ಸುಬ್ಬಣ್ಣ ಮತ್ತು ನಾರಾಯಣಪ್ಪನ ನಡುವೆ ವಿಭಾಗವಾಗಿತ್ತಾ ಎಂದರೆ ಗೊತ್ತಿಲ್ಲ. ನಾನು ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನನ್ನ ಹೆಂಡತಿ ಮಾಹಿತಿ ಕೊಟ್ಟಿರುತ್ತಾಳೆ. ನನ್ನ ಹೆಂಡತಿ ಆಗಸ್ಟ್ **2021** ರಲ್ಲಿ ಮೃತಪಟ್ಟಿರುತ್ತಾಳೆ. ದಾವಾ ಆಸ್ತಿಗಳು ಸುಬ್ಬಣ್ಣ ಮತ್ತು ನಾರಾಯಣಪ್ಪನ ನಡುವೆಯಾದ ವಿಭಾಗದಲ್ಲಿ ಸುಬ್ಬಣ್ಣನ ಹಿಸ್ಸೆಗೆ ಬಂದಿದೆ ಎಂದು ತಿಳಿಸಿದ್ದು, ಈ ಬಗ್ಗೆ ವಿಭಾಗ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

ಈ ದಾವೆ ಹಾಕುವ ಸಮಯದಲ್ಲಿ ದಾವಾ ಆಸ್ತಿಗಳ ಖಾತೆಯು ಯಾರಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಸುಬ್ಬಣ್ಣನವರು ಬದುಕಿದ್ದಾಗ

ಯಾವ ಯಾವ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ನೋಡಿಲ್ಲ. ಸುಬ್ಬಣ್ಣನವರು ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದು, ಸದರಿ ಕ್ರಯಪತ್ರಗಳನ್ನು ಅವರು ಮಾರಾಟ ಮಾಡಿದ ಆಸ್ತಿಗಳು ಅವರಿಗೆ ವಿಭಾಗದ ಮೂಲಕ ಬಂದಿದೆ ಎಂದು ನಮೂದಿಸಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.**5** ರ ಆಸ್ತಿಯು ಯಾರ ಹೆಸರಿಗೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆ ಅದ ವಿಭಾಗದಲ್ಲಿ ಸದರಿ ಆಸ್ತಿಯು ಯಾರ ಹಿಸ್ಸೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪೈಕಿ ಸರ್ವೆ ನಂ.**4/2** ರಲ್ಲಿ ಒಂದು ಎಕರೆ ಆಸ್ತಿಯ ಖಾತೆಯು ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. ಯಾವ ದಾಖಲೆಯ ಆಧಾರದ ಮೇಲೆ ಸದರಿ ಆಸ್ತಿಯು ನನ್ನ ಹೆಂಡತಿಯ ಹೆಸರಿಗೆ ಬಂದಿದೆ ಎಂದು ಗೊತ್ತಿಲ್ಲ. ಆದರೆ ಅವರ ತಂದೆ ಸದರಿ ಒಂದು ಎಕರೆಯನ್ನು ಕೊಟ್ಟಿರುತ್ತಾರೆ. ನಿ.ಪಿ.**13** ಎಂ.ಆರ್. ಪ್ರಕಾರ ವಿಭಾಗ ಪತ್ರದಂತೆ ಸುಬ್ಬಣ್ಣನವರ ಉಳಿಕೆ ಮಕ್ಕಳ ಹೇಳಿಕೆಯ ಅಧಾರದ ಮೇಲೆ ಸದರಿ ಆಸ್ತಿಯ ಖಾತೆಯನ್ನು ನನ್ನ ಹೆಂಡತಿಯ ಹೆಸರಿಗೆ ವರ್ಗಾವಣೆ ಮಾಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಸುಬ್ಬಣ್ಣ ಮತ್ತು ಅವರ ಮಕ್ಕಳ ನಡುವೆಯಾದ ವಿಭಾಗದಲ್ಲಿ ನನ್ನ ಹೆಂಡತಿಗೆ ಭಾಗ ಬಂದಿದ್ದರೂ ಕೂಡ ಯಾವುದೇ ವಿಭಾಗವಾಗಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಬ್ಬಣ್ಣನವರು ದಾವಾ ಐಟಂ ನಂ.**1** ಮತ್ತು **2** ರ ಆಸ್ತಿಗೆ ಸಂಬಂಧಿಸಿದಂತೆ 7ನೇ ಪ್ರತಿವಾದಿಗೆ ವಿಲ್ ಬರೆದಿದ್ದಾರೆ ಎಂದು ತಿಳಿಸಿದ್ದು, ಸದರಿ ವಿಲ್‌ನ್ನು ನೋಡಿದ್ದಿರಾ ಎಂದರೆ ಇಲ್ಲ. ಸದರಿ ವಿಲ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನಲ್ಲಿ ಸುಬ್ಬಣ್ಣನವರು ಅವರು ಮತ್ತು ಅವರ ಮಕ್ಕಳ ನಡುವೆಯಾದ ವಿಭಾಗದಲ್ಲಿ ಅವರಿಗೆ ಬಂದ ಹಿಸ್ಸೆಯನ್ನು ಅವರ ಮೊಮ್ಮಗನಾದ 7ನೇ ಪ್ರತಿವಾದಿಗೆ ವಿಲ್ ಮಾಡುತ್ತಿದ್ದೇನೆ ಎಂದು ಬರೆದಿದ್ದಾರೆ ಎಂದರೆ ಗೊತ್ತಿಲ್ಲ. **1, 6** ಮತ್ತು 7ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಯನ್ನು ಸರ್ಕಾರ ಈಗ ಸ್ವಾಧೀನಪಡಿಸಿಕೊಂಡಿದೆ ಎಂದರೆ ಸರಿ. ದಾವಾ

ಆಸ್ತಿಗೆ ಸಂಬಂಧಿಸಿದಂತೆ ವಿಭಾಗ ಆಗಿದ್ದರೂ ಕೂಡ ಸದರಿ ಆಸ್ತಿಯನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿರುವ ಕಾರಣ ಅದರಿಂದ ಬರುವ ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ವಿಭಾಗವಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಬದುಕಿದ್ದಾಗ 1, 6 ಮತ್ತು 7ನೇ ಪ್ರತಿವಾದಿಯ ಹೆಸರಿಗೆ ಆದ ಖಾತೆಯನ್ನು ಪ್ರಶ್ನಿಸಿದ್ದಾರಾ ಎಂದರೆ ಇಲ್ಲ.

**9 ಮತ್ತು 10ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.